## ಹೆಚ್‌ಡಿಆರ್‌ಟಿಎಸ್ ಬಸ್ಸು ಮಾರ್ಗಗಳ ವಿವರ

| ಮಾರ್ಗಗಳ ವಿವರ | ಯಿಂದ | ವರೆಗೆ |
|---|---|---|
| **200A** | ಸಿಬಿಟಿ ಹುಬ್ಬಳ್ಳಿ | ಧಾರವಾಡ ಬಿಆರ್‌ಟಿಎಸ್ ಟರ್ಮಿನಲ್ |
| **201B** | ರೈಲ್ವೆ ನಿಲ್ದಾಣ ಹುಬ್ಬಳ್ಳಿ | ಧಾರವಾಡ ಹೊಸ ಬಸ್ ನಿಲ್ದಾಣ |
| **200C** | ಡಾ.ಬಿ.ಆರ್. ಅಂಬೇಡ್ಕರ ನಿಲ್ದಾಣ, ಹುಬ್ಬಳ್ಳಿ | ಧಾರವಾಡ ಬಿಆರ್‌ಟಿಎಸ್ ಟರ್ಮಿನಲ್ |
| **201D** | ಕೇಂದ್ರೀಯ ಬಸ್ ನಿಲ್ದಾಣ ಹುಬ್ಬಳ್ಳಿ | ಧಾರವಾಡ ಹೊಸ ಬಸ್ ನಿಲ್ದಾಣ |
| **100 D** | ಕೇಂದ್ರೀಯ ಬಸ್ ನಿಲ್ದಾಣ ಹುಬ್ಬಳ್ಳಿ | ಧಾರವಾಡ ಬಿಆರ್‌ಟಿಎಸ್ ಟರ್ಮಿನಲ್. **ನಿಯಮಿತ ನಿಲುಗಡೆ :** ಹೊಸೂರು ವೃತ್ತ, ಕಿಮ್ಸ್, ನವನಗರ, ಎಸ್‌ಡಿಎಂ ಮೆಡಿಕಲ್, ಟೋಲ್‌ನಾಕ, ಎನ್‌ಟಿಟಿಎಫ್, ಕೋರ್ಟವೃತ್ತ, ಜುಬ್ಲಿವೃತ್ತ. |

**ವಿ. ಸೂಚನೆ :** ಸ್ಮಾರ್ಟಕಾರ್ಡನ್ನು ಸಧ್ಯ ಪ್ರಯೋಗಿಕವಾಗಿ ಬಿಡುಗಡೆಗೊಳಿಸಿರುವುದರಿಂದ ಯಾವುದೇ ತಾಂತ್ರಿಕ ಸಮಸ್ಯೆಗಳು ಕಂಡುಬಂದಲ್ಲಿ ಬಿಆರ್‌ಟಿಎಸ್ ಸಿಬ್ಬಂದಿಗಳು ತಾಂತ್ರಿಕ ಸಮಸ್ಯೆಯನ್ನು ಬಗೆ ಹರಿಸುವವರೆಗೆ ಪ್ರಯಾಣಿಕರು ಸಹಕರಿಸಲು ಕೋರಲಾಗಿದೆ




## ಒಟ್ಟಾರೆ ಸಮಯ, ಹಣ ಮತ್ತು ಶ್ರಮದ ಉಳಿತಾಯ

**ಶೀಘ್ರ, ಸುರಕ್ಷಿತ, ಸುಖಕರ ಪ್ರಯಾಣಕ್ಕಾಗಿ ಹೆಚ್–ಡಿ ಬಿಆರ್‌ಟಿಎಸ್**

E-mail: hdbrts@gmail.com
https : //facebook.com/HubliDharwadBRTS
https : //instagram.com/hubballi_dharwad_brts
https : //twitter.com.HDBRTS
web : www.hdbrts.com




ಕರ್ನಾಟಕ ಸರ್ಕಾರ

# ಹುಬ್ಬಳ್ಳಿ–ಧಾರವಾಡ ಬಿಆರ್‌ಟಿಎಸ್ ಕಂಪನಿ ನಿಯಮಿತ. ಹುಬ್ಬಳ್ಳಿ

## ಪ್ರಯಾಣಿಕರಿಗೆ ಮಾಸಿಕ ರಿಯಾಯಿತಿ ದರ ಸ್ಮಾರ್ಟಕಾರ್ಡ ಬಗ್ಗೆ ಮಾಹಿತಿ

ಹುಬ್ಬಳ್ಳಿ–ಧಾರವಾಡ ಬಿಆರ್‌ಟಿಎಸ್ ಯೋಜನೆಯು ಸಾರ್ವಜನಿಕರ ಪ್ರಯಾಣಕ್ಕಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ ಅದರಲ್ಲಿ ಸ್ಮಾರ್ಟಕಾರ್ಡ ಕೂಡ ಒಂದು, ಸಾರ್ವಜನಿಕರ ಬಹುನಿರೀಕ್ಷಿತ ಈ ಸ್ಮಾರ್ಟಕಾರ್ಡನ್ನು ಹಲವಾರು ಸೌಲಭ್ಯಗಳೊಂದಿಗೆ ಸಾರ್ವಜನಿಕ ಪ್ರಯಾಣಕ್ಕಾಗಿ ವಿತರಿಸಲಾಗುತ್ತದೆ.

**ಸ್ಮಾರ್ಟಕಾರ್ಡ ವಿಧಗಳು (Types of Smart Card)**

1. ಇ–ಪರ್ಸ ಸ್ಮಾರ್ಟಕಾರ್ಡ (E-Purse Smart Card)
2. ರಿಯಾಯಿತಿ ದರ ಸ್ಮಾರ್ಟಕಾರ್ಡ (Concessional Smart Card)
3. ವಿದ್ಯಾರ್ಥಿಗಳ ಸ್ಮಾರ್ಟಕಾರ್ಡ (Student Smart Card)

ಹೀಗೆ ಮೂರು ಮಾದರಿಯಲ್ಲಿ ಸ್ಮಾರ್ಟಕಾರ್ಡಗಳು ಲಭ್ಯವಿದ್ದು ಪ್ರಸ್ತುತ ಪ್ರಾಯೋಗಿಕವಾಗಿ **ರಿಯಾಯಿತಿ ದರ ಸ್ಮಾರ್ಟಕಾರ್ಡ** (Concessional Smart Card) ಗಳನ್ನು ಮಾಸಿಕ ಶುಲ್ಕ ಪಾವತಿಸಿಕೊಂಡು ಪ್ರಯಾಣಕ್ಕಾಗಿ ವಿತರಿಸಲಾಗುತ್ತದೆ. ಇದನ್ನು ಬಿಆರ್‌ಟಿಎಸ್ ಬಸ್ಸುಗಳಲ್ಲಿ ಪ್ರಯಾಣಿಸಲು ಉಪಯೋಗಿಸಬಹುದಾಗಿದೆ.

**ರಿಯಾಯಿತಿ ದರ ಸ್ಮಾರ್ಟಕಾರ್ಡ (Concessional Smart Card) - Monthly Pass**

ಪ್ರಯಾಣಿಕರು ಮಾಸಿಕ ರಿಯಾಯಿತಿ ದರದ ಪಾಸ್‌ನ ಬದಲಾಗಿ ಪ್ರಯಾಣಿಸಲು ಈ ರಿಯಾಯಿತಿ ಸ್ಮಾರ್ಟಕಾರ್ಡಗಳನ್ನು ಬಳಸಬಹುದಾಗಿದೆ. ಅಧಿಕೃತವಾಗಿ ಪಾಸಗಳನ್ನು ಪಡೆದ ಪ್ರಯಾಣಿಕರನ್ನು ಹೊರತುಪಡಿಸಿ ಬೇರೆಯವರಿಗೆ ಇದನ್ನು ಬಳಸುವ ಅವಕಾಶವಿರುವುದಿಲ್ಲ.

**ರಿಯಾಯಿತಿ ಸ್ಮಾರ್ಟಕಾರ್ಡಗಳ ವೈಶಿಷ್ಟ ಮತ್ತು ಉಪಯೋಗಗಳು (Features & Uses of Concessional Smart Card/Monthly Pass)**

1. ಟಿಕೇಟ್ ಕೌಂಟರ್‌ಗಳಲ್ಲಿ ಸಾಲಿನಲ್ಲಿ ನಿಂತು ಟಿಕೇಟ್ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ.
2. ಕಾಗದ ರಹಿತ ವಹಿವಾಟು ಮತ್ತು ಪರಿಸರ ಸ್ನೇಹಿ.
3. ಅಧಿಕೃತವಾಗಿ ಪಾಸುಗಳನ್ನು ಪಡೆದ ವ್ಯಕ್ತಿಗೆ ಮಾತ್ರ ಪ್ರವೇಶ.
4. ಪ್ರಯಾಣಿಕರು ನಿಗದಿತ (**Source**) ಸ್ಥಳದಿಂದ ಬಿಆರ್‌ಟಿಎಸ್ ಬಸ್ ಹತ್ತಿ ನಿಗದಿತ (**Destination**) ಸ್ಥಳಕ್ಕೆ ಮಾತ್ರ ಇಳಿಯಲು ಅವಕಾಶವಿರುವುದು.
5. ಪ್ರಯಾಣಿಕರಿಗೆ ಬಿಆರ್‌ಟಿಎಸ್ ಬಸ್ ನಿಲ್ದಾಣಗಳಲ್ಲಿ ಪ್ರವೇಶ ಮತ್ತು ನಿರ್ಗಮನ ಅತಿ ಸುಲಭ
6. ಖರೀದಿಸಿದ ಸ್ಮಾರ್ಟಕಾರ್ಡ 5 ವರ್ಷದ ಅವಧಿಯನ್ನು ಹೊಂದಿರುತ್ತದೆ. ಆದರೆ ಪ್ರಯಾಣಿಕರು ಆಯಾ ರಿಯಾಯಿತಿ ಕಾರ್ಡುಗಳಿಗೆ ತಕ್ಕ ಹಾಗೆ ಪ್ರತಿ ತಿಂಗಳು ನವೀಕರಿಸಿಕೊಳ್ಳಬೇಕು.
7. ಪ್ರಯಾಣಿಕರು ಅಧಿಕೃತವಾದ ದಾಖಲೆಗಳನ್ನು ಸಲ್ಲಿಸಿ ಸ್ಮಾರ್ಟಕಾರ್ಡಗಳನ್ನು ಪಡೆಯಬಹುದಾಗಿದೆ.

## ಸ್ಮಾರ್ಟಕಾರ್ಡನ್ನು ಬಳಸುವ ವಿಧಾನ (How to use Smart Card)

1. ಸ್ಮಾರ್ಟಕಾರ್ಡನ್ನು ಹೊಂದಿದ ಪ್ರಯಾಣಿಕರು ಬಸ್‌ನಿಲ್ದಾಣದಲ್ಲಿ ಫೇರ್‌ಗೇಟ್‌ನಲ್ಲಿರುವ ಕಪ್ಪುಗ್ಲಾಸಿಗೆ ಕಾರ್ಡನ್ನು ಸ್ಮಾರ್ಟಕಾರ್ಡ ಗುರುತು ಚಿಹ್ನೆ ಇರುವಲ್ಲಿ ತೋರಿಸಿ Tap in ಮಾಡಿಕೊಂಡು ಒಳಗೆ ಪ್ರವೇಶಿಸಬೇಕು ಹಾಗೂ ಕಡ್ಡಾಯವಾಗಿ Tap out ಮಾಡಿಕೊಂಡು ಬಸ್‌ನಿಲ್ದಾಣದಿಂದ ಹೊರಗೆ ಹೋಗಬೇಕು.
2. ಪ್ರಯಾಣಿಕರು ಸರದಿ ಸಾಲಿನಲ್ಲಿ ನಿಂತು ಫೇರ್‌ಗೇಟಿನ ಹತ್ತಿರವಿರುವ ಹಳದಿ ಪಟ್ಟಿಯಿಂದ ಆಚೆ ನಿಂತು ಒಬ್ಬಬ್ಬರಾಗಿ ಸ್ಕ್ಯಾನ್ ಮಾಡಿ ಫೇರ್‌ಗೇಟುಗಳು ತೆರೆದ ನಂತರ ಬಸ್ ನಿಲ್ದಾಣಕ್ಕೆ ಪ್ರವೇಶಿಸಬೇಕು ಮತ್ತು ನಿರ್ಗಮಿಸಬೇಕು.
3. ಮಾಸಿಕ ಶುಲ್ಕ ಪಾವತಿಸಿದ ನಿಗದಿತ 30 ದಿನಗಳ ಅವಧಿಗೆ ಮಾತ್ರ ಈ ಪಾಸ್ ಚಾಲ್ತಿಯಲ್ಲಿರುತ್ತದೆ.

## ಪ್ರಯಾಣಿಕರ ಗಮನಕ್ಕೆ (Kind Attention to Passengers)

1. ಪ್ರಯಾಣಿಕರು ಒಂದು ಬಾರಿ ನೀಡಲಾದ ಸ್ಮಾರ್ಟಕಾರ್ಡ ಕಳೆದು ಹೋದಲ್ಲಿ ಶುಲ್ಕ ಮತ್ತು ದಂಡ ಸಮೇತವಾಗಿ ನೀಡಿದಲ್ಲಿ ಸ್ಮಾರ್ಟಕಾರ್ಡನ್ನು ಮರು ಹಂಚಿಕೆ ಮಾಡಲಾಗುವುದು.
2. ಪ್ರಯಾಣಿಕರು ಬಸ್‌ನಿಲ್ದಾಣದ ಫೇರ್‌ಗೇಟ್‌ನಲ್ಲಿರುವ ಕಪ್ಪುಗ್ಲಾಸಿಗೆ ಸ್ಮಾರ್ಟ ಕಾರ್ಡನ್ನು ತೋರಿಸಿ ಒಳಗೆ ಪ್ರವೇಶಿಸಿ ಮುಂದಿನ ನಿಲ್ದಾಣದಲ್ಲಿ ಹೊರಗೆ ಬರುವಾಗ ಒಂದು ಪಕ್ಷ ಫೇರ್‌ಗೇಟ್‌ನಲ್ಲಿರುವ ಕಪ್ಪುಗ್ಲಾಸಿಗೆ ಕಾರ್ಡನ್ನು ತೋರಿಸದೇ ಹೊರಬಂದಲ್ಲಿ ಸ್ಮಾರ್ಟ ಕಾರ್ಡ ಲಾಕ್ ಆಗುವುದು.
3. ಲಾಕ್ ಆದ ಕಾರ್ಡನ್ನು ಮತ್ತೆ ಪ್ರಾರಂಬಿಸಲು ರೂ. 26 ದಂಡ ಶುಲ್ಕವಾಗಿ ಬಿಆರ್‌ಟಿಎಸ್ ಬಸ್ ನಿಲ್ದಾಣಗಳಲ್ಲಿ ಪಾವತಿಸಿ ತಮ್ಮ ಸ್ಮಾರ್ಟಕಾರ್ಡನ್ನು ಚಾಲ್ತಿ ಮಾಡಿಸಿಕೊಳ್ಳಬಹುದು. ಈ ಕುರಿತು ಪ್ರಯಾಣಿಕರು ಸ್ಮಾರ್ಟಕಾರ್ಡ ಖರೀಸುವ ಸಮಯದಲ್ಲಿ ಸಂಸ್ಥೆಯ ಸಿಬ್ಬಂದಿಯಿಂದ ಸೂಕ್ತ ಮಾರ್ಗದರ್ಶನ ಪಡೆಯುವುದು.
4. ಪ್ರಯಾಣಿಕರು ಬಿಆರ್‌ಟಿಎಸ್ ಬಸ್ ನಿಲ್ದಾಣದ ಒಳಗೆ ಪ್ರವೇಶಿಸಿ ಮತ್ತೊಂದು ಬಸ್ ನಿಲ್ದಾಣದಿಂದ ಹೊರಗೆ ಬರುವ ಸಮಯ 2 ಗಂಟೆ ಮೀರಿದ್ದಲ್ಲಿ ಕಾರ್ಡ ಲಾಕ್ ಆಗುವುದು ಲಾಕ್ ಆದ ಕಾರ್ಡನ್ನು ಮರುಚಾಲ್ತಿ ಮಾಡಿಸಲು Tap In (ಪ್ರಯಾಣ ಪ್ರಾರಂಭವಾದ) ನಂತರದ ಸಮಯದಿಂದ ಗಂಟೆಗಳನ್ನು ಲೆಕ್ಕಾಚಾರ ಮಾಡಿ ಪ್ರತಿಯೊಂದು ತಾಸಿಗೆ 10 ರೂಪಾಯಿದಂತೆ ಗರಿಷ್ಠ ರೂ. 76/– ಗಳ ವರೆಗೆ ದಂಡಶುಲ್ಕವೆಂದು ಪರಿಗಣಿಸಿ ನಿಲ್ದಾಣದಲ್ಲಿ ಪಾವತಿಸುವುದು.
5. ಯಾವುದೇ ಸಮಸ್ಯೆಗಳು ಕಂಡುಬಂದಲ್ಲಿ ಬಿಆರ್‌ಟಿಎಸ್ ಸಿಬ್ಬಂದಿಗಳನ್ನು ಸಂಪರ್ಕಿಸುವುದು ಅಥವಾ ಉಚಿತ ಸಹಾಯವಾಣಿಗೆ 18005991010 ಕರೆ ಮಾಡಬಹುದು.
6. ಸ್ಮಾರ್ಟಕಾರ್ಡ ಹೊಂದಿದ ಪ್ರಯಾಣಿಕರು ಪ್ರಯಾಣದ ಸಮಯದಲ್ಲಿ ಸಂಬಂಧಪಟ್ಟ ತನಿಖಾಧಿಕಾರಿಗಳು ಕೇಳಿದಾಗ ಕಾರ್ಡ ತೋರಿಸಿ ತನಿಖೆಗೆ ಸಹಕರಿಸಬೇಕು.
7. ಪ್ರಯಾಣಿಕರು ತಮಗೆ ನೀಡಿದ ಸ್ಮಾರ್ಟಕಾರ್ಡನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ತಮ್ಮದಾಗಿದ್ದು ಮತ್ತೊಬ್ಬರಿಗೆ ಪರಬಾರೆ ಮಾಡಿದ್ದು ಕಂಡುಬಂದಲ್ಲಿ ಅಂತಹ ಪ್ರಯಾಣಿಕರ ಸ್ಮಾರ್ಟಕಾರ್ಡನ್ನು ವಶಪಡಿಸಿಕೊಂಡು ಮುಂದಿನ ದಿನಗಳಲ್ಲಿ ಅಂತಹ ಪ್ರಯಾಣಿಕರಿಗೆ ಸ್ಮಾರ್ಟಕಾರ್ಡನ್ನು ನೀಡಲಾಗುವುದಿಲ್ಲ ಹಾಗೂ ಅವಶ್ಯವಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
8. ಕಡ್ಡಾಯವಾಗಿ ನಿಗದಿತ (**Source**) ಸ್ಥಳದಿಂದ ನಿಗದಿತ (**Destination**) ಸ್ಥಳಕ್ಕೆ ಮಾತ್ರ ಪ್ರಯಾಣಿಸಲು ಅವಕಾಶವಿರುವುದು ಹೊರತಾಗಿ ಮುಂದಿನ ಬಸ್ ನಿಲ್ದಾಣಕ್ಕೆ ಪ್ರಯಾಣಿಸಲು ಅವಕಾಶವಿರುವುದಿಲ್ಲ. ಹಾಗೇನಾದರೂ ಪ್ರಯಾಣ ಮಾಡಿದ್ದಲ್ಲಿ ಮುಂದಿನ ನಿಲ್ದಾಣದಲ್ಲಿ ಫೇರ್‌ಗೇಟ್ ತೆರೆದುಕೊಳ್ಳುವುದಿಲ್ಲ. ಅಂತಹ ಸಮಯದಲ್ಲಿ ರೂ. 260/– ಗಳ ದಂಡ ಶುಲ್ಕವನ್ನು ವಿಧಿಸಲಾಗುವುದು ಹಾಗೂ ಸ್ಮಾರ್ಟಕಾರ್ಡನ್ನು ವಶಪಡಿಸಿ ಕೊಳ್ಳಲಾಗುವುದು.

## ಪ್ರಯಾಣಿಕರ ಸ್ಮಾರ್ಟಕಾರ್ಡಗಳ ಬದಲಾವಣೆ (Replacement of Smart Card)

ಒಂದು ವೇಳೆ ತಾಂತ್ರಿಕ ದೋಷದಿಂದ (Technical Error) ಸ್ಮಾರ್ಟಕಾರ್ಡ ಕಾರ್ಯ ನಿರ್ವಹಿಸದೇ ಇದ್ದಲ್ಲಿ ಮಾತ್ರ ಸ್ಮಾರ್ಟಕಾರ್ಡನ್ನು ಉಚಿತವಾಗಿ ಬದಲಿಸಲು ಅನುಮತಿ ಇದೆ ಈ ಪ್ರಕರಣದಲ್ಲಿ ಹೆಚ್ಚುವರಿ ಶುಲ್ಕವಿಲ್ಲದೆ ಕಾರ್ಡನ್ನು ಬದಲಾಯಿಸಲಾಗುತ್ತದೆ ಮತ್ತು ಕಾರ್ಡನಲ್ಲಿರುವ ಬಾಕಿ ಮೊತ್ತವನ್ನು ಹೊಸ ಕಾರ್ಡಿಗೆ ವರ್ಗಾವಣೆ ಮಾಡಲಾಗುವುದು. ಒಂದು ವೇಳೆ ಪ್ರಯಾಣಿಕರ ನಿರ್ಲಕ್ಷದಿಂದಾಗಿ ಸದರಿ ಕಾರ್ಡ ಭೌತಿಕವಾಗಿ ಹಾನಿ (Physically Damage) ಆದಲ್ಲಿ ಯಾವುದೇ ಸೌಲಭ್ಯಗಳು ದೊರಕುವುದಿಲ್ಲ.

**ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು**
**(For more information please contact below)**

1. ಹೆಚ್‌ಡಿಬಿಆರ್‌ಟಿಎಸ್ ಉಚಿತ ದೂರವಾಣಿ ಸಂಖ್ಯೆ: 18005991010
2. ವೆಬ್ ಪೋರ್ಟಲ್ ವಿಳಾಸ: www.hdbrts.com
3. ಅಹವಾಲುಗಳ ಸ್ವೀಕೃತಿ ಇ–ಮೇಲ್ ವಿಳಾಸ: hdbrts.grievance@gmail.com
4. ಬಸ್ ನಿಲ್ದಾಣದ ಟಿಕೇಟ್ ಕೌಂಟರ್‌ಗಳು
5. ಚಿಗರಿ ಆಪ್ (Chigari App)

*** ವಿ.ಸೂ: ಮೇಲ್ಕಾಣಿಸಿದ ವಿಷಯಗಳು ಸಂದರ್ಭಕ್ಕೆ ಅನುಗುಣವಾಗಿ ಪ್ರಯಾಣಿಕರ ಯಾವುದೇ ಮುನ್ಸೂಚನೆ ಇಲ್ಲದೇ ಬದಲಾವಣೆಗೆ ಒಳಪಡುತ್ತವೆ.**